**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 17/2018**

**ದೋ.ಸಾ. : 1 ಫ್ರಾ.ಸಾ. : 1**

ಸಾಕ್ಷಿಯ ಹೆಸರು : ಸುವರ್ಣ

ಗಂಡನ ಹೆಸರು : ಮಂಜುನಾಥ ಶೇಟ್

ವಯಸ್ಸು : 63 ವರ್ಷ

ಉದ್ಯೋಗ : ಮನೆವಾರ್ತೆ

ವಾಸ : ಡಿ ಪಿ ಕಾಲನಿ ಸಾಗರ ರಸ್ತೆ

**ದಿನಾಂಕಃ 04–03–2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದೋಸಾ–15 ನನ್ನ ಮಗ . ದೋಸಾ–8 ನನ್ನ ಭಾವನ ಹೆಂಡತಿ . ದೋಸಾ–14 ದೋಸಾ–8 ರವರ ಮಗ . ದೋಸಾ–8 ಮತ್ತು 14 ರವರು ಒಟ್ಟಾಗಿ ಭಟ್ಕಳದ ಸೋನಾರಕೇರಿಯಲ್ಲಿರುವ ಅವರ ಮನೆಯಲ್ಲಿ ವಾಸ ಇದ್ದರು. ದೋಸಾ–9 ರವರ ಮನೆ ದೋಸಾ–8 ರವರ ಮನೆ ಎದುರುಗಡೆ ಇದೆ . ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು . ಆರೋಪಿಯ ಮನೆ ದೋಸಾ–8 ರವರ ಮನೆಯ ಪಕ್ಕದ ಕಂಪೌಂಡ್ ನಲ್ಲಿ ಇದೆ. ಆದ್ದರಿಂದ ಆರೋಪಿಯನ್ನು ಮೊದಲಿನಿಂದ ನೋಡಿ ನನಗೆ ಪರಿಚಯ ಇದೆ . ನಾನು ನನ್ನ ಮಗ ಆಗ್ಗಾಗ್ಗೆ ದೋಸಾ–8 ರವರ ಮನೆಗೆ ಹೋಗುತ್ತಿದ್ದೆವು . ದೋಸಾ–8 ರವರು ಮೂರು ವರ್ಷದ ಹಿಂದೆ ಈ ಪ್ರಕರಣದ ಘಟನೆಯಾದ ನಂತರ ಮೃತಪಟ್ಟಿದ್ದಾರೆ.

2. ಸೋನಾರಕೇರಿಯ ವೆಂಕಟ್ರಮಣ ದೇವಸ್ಥಾನದಲ್ಲಿ ರಥೋತ್ಸವ ಇದ್ದದ್ದರಿಂದ ದಿನಾಂಕ 01.02.2017 ರಂದು ನಾನು ನನ್ನ ಮಗ ದೋಸಾ–15 ಜೊತೆ ದೋಸಾ–8 ರವರ ಮನೆಗೆ ಬಂದಿದ್ದೆ. ದೋಸಾ–8 ರವರ ಮಗ ದೋಸಾ–15 ಹಾಗೂ ನನ್ನ ಮಗ ದೋಸಾ–14 ರವರು ರಥೋತ್ಸವಕ್ಕೆ ಹೋದರು. ನಾನು ಮತ್ತು ನನ್ನ ಭಾವನ ಹೆಂಡತಿ ದೋಸಾ–8 ರವರು ಟಿ.ವಿ. ನೋಡುತ್ತಾ ಹಾಲ್ ನಲ್ಲಿ ಕುಳಿತಿದ್ದೆವು . ಆಗ ದೋಸಾ–8 ರವರ ಮನೆಯ ಹಿಂದಿನ ಮತ್ತು ಮುಂದಿನ ಬಾಗಿಲು ಹಾಕಿಕೊಂಡು ಟಿ.ವಿ. ಯನ್ನು ನೋಡುತ್ತಿದ್ದೆವು . ಹಿಂದಿನ

ಬಾಗಿಲು ತಟ್ಟಿದ ಶಬ್ದ ಕೇಳಿತು . ಆಗ ರಾತ್ರಿ ಸುಮಾರು 9.00 ರಿಂದ 10.00 ಗಂಟೆಯಾಗಿರಬಹುದು. ಆಗ ದೋಸಾ–8 ಹಿಂದಿನ ಬಾಗಿಲು ತೆಗೆದು ಬಂದರು. ಆಗ ಆರೋಪಿ ಬಾಗಿಲಿನ ಹೊರಗೆ ನಿಂತಿದ್ದ. ಆರೋಪಿ ಕೈಯಲ್ಲಿ ಒಂದು ದೊಣ್ಣೆ ಇತ್ತು . ಆರೋಪಿ ಬಂದವನೇ ಅಡಿಗೆ ಕೋಣೆಗೆ ಬಂದು ದೋಸಾ–8 ರವರ ತಲೆಗೆ ದೊಣ್ಣೆಯಿಂದ ಹೊಡೆದ. ಆಗ ದೋಸಾ–8 ಕುರ್ಚಿಯಿಂದ ಆರೋಪಿಗೆ ಹೊಡೆಯಲು ಹೋದಳು. ಆರೋಪಿ ತಪ್ಪಿಸಿಕೊಂಡ . ಕೊನೆಗೆ ದೋಸಾ–8 ಕೆಳಗಡೆ ಬಿದ್ದು ಬಿಟ್ಟಳು . ಆಕೆ ಬೀಳುವುದಕ್ಕೆ ಮೊದಲು ಆರೋಪಿ ದೊಣ್ಣೆಯಿಂದ ಎರಡು ಬಾರಿ ದೋಸಾ–8 ರವರಿಗೆ ಹೊಡೆದಿದ್ದ. ಆಕೆ ಬಿದ್ದ ಮೇಲೆ ಇನ್ನೊಂದು ಬಾರಿ ಹೊಡೆದ . ನಾನು ಆಗ ಕೂಗಿಕೊಂಡೆ. ದೋಸಾ–8 ಸಹ ಕೂಗಿಕೊಂಡಳು . ಆಗ ಪಕ್ಕದ ಮನೆಯವರಾದ ದೋಸಾ–9 ಮತ್ತು 10 ಓಡಿ ಬಂದರು. ದೋಸಾ–8 ರವರಿಗೆ ತಲೆಗೆ ಗಾಯ ಆಗಿ ರಕ್ತ ಬಂತು . ಆಕೆಯ ಸೀರೆ ಮೇಲೆ ಎಲ್ಲಾ ರಕ್ತ ಬಿದ್ದಿತು. ಆರೋಪಿ ಹೊಡೆಯಲು ಉಪಯೋಗಿಸಿದ ದೊಣ್ಣೆಯನ್ನು ಅಲ್ಲಿಯೇ ಬಿಟ್ಟು ಓಡಿ ಹೋದ . ಆಗ ಪಕ್ಕದ ಮನೆಯವರು ದೋಸಾ–14 ಮತ್ತು 15 ರವರಿಗೆ ಫೋನ್ ಮಾಡಿದ ನಂತರ ಅವರು ಮನೆಗೆ ಕೂಡಲೇ ಬಂದರು. ದೇವಸ್ಥಾನ ದೋಸಾ–8 ರವರ ಮನೆಯಿಂದ 1 ಕಿ.ಮೀ. ಗಿಂತ ಕಡಿಮೆ ದೂರದಲ್ಲಿ ಇದೆ. ದೋಸಾ–14 ಮತ್ತು 15 ರವರು ಬಂದ ಮೇಲೆ ದೋಸಾ–8 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟೆ. ನಾನು ಕೊಟ್ಟ ದೂರನ್ನು ಗುರುತಿಸುತ್ತೇನೆ. ಈಗ ಅದನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ . ಆ ದೂರನ್ನು ನಿ.ಪಿ. 1 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು. ಭಟ್ಕಳದ ಆಸ್ಪತ್ರೆಯಲ್ಲಿ ಬ್ಯಾಂಡೇಜ್ ಹಾಕಿ ಅಲ್ಲಿ ಆಗುವುದಿಲ್ಲ ಎಂದು ಮುಂದಿನ ಚಿಕಿತ್ಸೆಗೆ ಉಡುಪಿಯ ಆದರ್ಶ ಆಸ್ಪತ್ರೆಗೆ ಕಳುಹಿಸಿದರು. ಆರೋಪಿ ನನ್ನ ಅಕ್ಕ ದೋಸಾ–8 ರವರಿಗೆ ಹೊಡೆಯುವುದನ್ನು ನನ್ನನ್ನು ಬಿಟ್ಟರೆ ಬೇರೆ ಯಾರೂ ನೋಡಿರುವುದಿಲ್ಲ. ಆರೋಪಿಯು ನನ್ನ ಅಕ್ಕ ಒಬ್ಬಳೇ ಇದ್ದಿದ್ದರೆ ಕೊಲೆ ಮಾಡಿ ಹೋಗುತ್ತಿದ್ದ. ನನ್ನ ಅಕ್ಕ ಮತ್ತು ಆಕೆಯ ಮಗ ಇಬ್ಬರೇ ಮನೆಯಲ್ಲಿ ಇರುತ್ತಿದ್ದರು . ಆಕೆಯ ಮಗ ಮನೆಯಿಂದ ಹೊರಗೆ ಹೋದಾಗ ದೋಸಾ–8 ಒಬ್ಬಳೇ ಮನೆಯಲ್ಲಿ ಇರುತ್ತಿದ್ದ ವಿಚಾರ ಆರೋಪಿಗೆ ಗೊತ್ತಾಗುತ್ತಿತ್ತು.

3. ನಾನು ದೂರು ಕೊಟ್ಟ ಮಾರನೇ ದಿನ ಪೊಲೀಸ್ ನವರು ಘಟನಾ ಸ್ಥಳಕ್ಕೆ ಬಂದರು. ಪೊಲೀಸ್ ನವರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿದಾಗ ನಾನು ಸ್ಥಳದಲ್ಲಿ ಇರಲಿಲ್ಲ ದೋಸಾ-14 ಮತ್ತು 15 ರವರು ಇದ್ದರು. ನಾನು ಘಟನಾ ಸ್ಥಳವನ್ನು ಪೊಲೀಸ್ ನವರಿಗೆ ತೋರಿಸಿಲ್ಲ. ಈಗ ತೋರಿಸಿದ ದಾಖಲಾತಿಯಲ್ಲಿ ನನ್ನ ರುಜು ಇದೆ . ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಿದ್ದು ಅದನ್ನು ನಿ.ಪಿ. 2 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು. ಪೊಲೀಸ್ ನವರು ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಜಪ್ತು ಮಾಡಿರುವುದಿಲ್ಲ. ಈಗ ತೋರಿಸಿದ ಛಾಯಾಚಿತ್ರದಲ್ಲಿ ನಾನು ಇದ್ದೇನೆ. ಆ ಛಾಯಾಚಿತ್ರವನ್ನು ಪೊಲೀಸ್ ನವರು ಪಂಚನಾಮೆ ಮಾಡುವಾಗ ತೆಗೆದಿರುತ್ತಾರೆ. ಪೊಲೀಸ್ ನವರು ಪಂಚನಾಮೆ ಮಾಡಲು ಕರೆದಿದ್ದರಿಂದ ನಾನು ಹೋಗಿದ್ದೆ. ನನ್ನ ಸಮಕ್ಷಮ ಪೊಲೀಸ್ ನವರು ಪಂಚನಾಮೆ ಮಾಡಿದ್ದಾರೆ. ಆ ಸಮಯದಲ್ಲಿ ನಾನು ಪೊಲೀಸ್ ನವರಿಗೆ ಆರೋಪಿ ಹೊಡೆಯಲು ಉಪಯೋಗಿಸಿದ ದೊಣ್ಣೆಯನ್ನು ತೋರಿಸಿರುತ್ತೇನೆ. ಆ ಛಾಯಾಚಿತ್ರವನ್ನು ನಿ.ಪಿ. 3 ಎಂದು ಗುರುತಿಸಲಾಯಿತು. ಅದರಲ್ಲಿ ಆ ದೊಣ್ಣೆ ಕಾಣುತ್ತದೆ . ಆ ಛಾಯಾಚಿತ್ರದಲ್ಲಿ ಇರುವ ಸ್ಥಳದಲ್ಲಿಯೇ ನನ್ನ ಅಕ್ಕನಿಗೆ ಆರೋಪಿ ಹೊಡೆದಿರುತ್ತಾನೆ . ಆ ದೊಣ್ಣೆಯನ್ನು ಪೊಲೀಸ್ ನವರು ಬಟ್ಟೆ ಸುತ್ತಿ ತೆಗೆದುಕೊಂಡು ಹೋದರು. (ಈಗ ತೆರೆದ ನ್ಯಾಯಾಲಯದಲ್ಲಿ ಮೊಹರಾದ ಬಟ್ಟೆ ಸುತ್ತಿದ ದೊಣ್ಣೆಯನ್ನು ಅದಕ್ಕೆ ಹಾಕಿರುವ ಮೊಹರು ಸುಸ್ಥಿತಿಯಲ್ಲಿ ಇರುವುದನ್ನು ಆರೋಪಿ ಮತ್ತು ಅವನ ಪರ ವಕೀಲರು ಶ್ರೀಮತಿ ಪಿ ಸಿ ಕೆ ರವರ ಸಮಕ್ಷಮ ಪರಿಶೀಲಿಸಿ ಖಾತ್ರಿ ಪಡಿಸಿಕೊಂಡು ತೆರೆಯಲಾಗಿದೆ ). ಈಗ ತೋರಿಸಿದ ದೊಣ್ಣೆ ಆಗ ಜಪ್ತು ಮಾಡಿದ ಆರೋಪಿ ಹೊಡೆಯಲು ಉಪಯೋಗಿಸಿದ ದೊಣ್ಣೆಯಾಗಿದೆ. ಆ ದೊಣ್ಣೆಯನ್ನು ಮು.ಮಾ. 1 ಎಂದು ಗುರುತಿಸಲಾಯಿತು. ಆ ದಿನ ಘಟನೆಯಲ್ಲಿ ರಕ್ತದ ಕಲೆಯಾದ ನನ್ನ ಅಕ್ಕನ ಸೀರೆಯನ್ನು ನೋಡಿದರೆ ಗುರುತಿಸುತ್ತೇನೆ. (ಈಗ ತೆರೆದ ನ್ಯಾಯಾಲಯದಲ್ಲಿ ಮೊಹರಾದ ಬಟ್ಟೆ ಸುತ್ತಿದ ಸೀರೆ ಇರುವ ಚೀಲಕ್ಕೆ ಹಾಕಿರುವ ಮೊಹರು ಸುಸ್ಥಿತಿಯಲ್ಲಿ ಇರುವುದನ್ನು ಆರೋಪಿ ಮತ್ತು ಅವನ ಪರ ವಕೀಲರು ಶ್ರೀಮತಿ ಪಿ ಸಿ ಕೆ ರವರ ಸಮಕ್ಷಮ ಪರಿಶೀಲಿಸಿ ಖಾತ್ರಿ ಪಡಿಸಿಕೊಂಡು ತೆರೆಯಲಾಗಿದೆ ). ಈಗ ನೋಡಿದ ಸೀರೆ ಅದೇ ಸೀರೆಯಾಗಿದೆ . ಅದರ ಮೇಲೆ ರಕ್ತದ ಕಲೆ ಇದೆ . ಆ ಸೀರೆಯನ್ನು ಮು.ಮಾ. 2 ಎಂದು ಗುರುತಿಸಲಾಯಿತು. ಆರೋಪಿ ಘಟನೆ ಸಮಯದಲ್ಲಿ ಚೌಕುಳಿ ಅಂಗಿ ಮತ್ತು ಲುಂಗಿ ಧರಿಸಿದ್ದ.

ಆರೋಪಿಯ ಅಂಗಿಗೆ ಘಟನೆಯಲ್ಲಿ ರಕ್ತ ತಾಗಿತ್ತು . (ಈಗ ತೆರೆದ ನ್ಯಾಯಾಲಯದಲ್ಲಿ ಮೊಹರಾದ ಬಟ್ಟೆ ಸುತ್ತಿದ ಅಂಗಿ ಇರುವ ಚೀಲಕ್ಕೆ ಹಾಕಿರುವ ಮೊಹರು ಸುಸ್ಥಿತಿಯಲ್ಲಿ ಇರುವುದನ್ನು ಆರೋಪಿ ಮತ್ತು ಅವನ ಪರ ವಕೀಲರು ಶ್ರೀಮತಿ ಪಿ ಸಿ ಕೆ ರವರ ಸಮಕ್ಷಮ ಪರಿಶೀಲಿಸಿ ಖಾತ್ರಿ ಪಡಿಸಿಕೊಂಡು ತೆರೆಯಲಾಗಿದೆ ). ಈಗ ತೋರಿಸಿದ ಅಂಗಿ ಆರೋಪಿ ಆ ಧರಿಸಿದ್ದ ಅಂಗಿಯಾಗಿದೆ . ಸದರಿ ಅಂಗಿಯನ್ನು ಮು.ಮಾ. 3 ಎಂದು ಗುರುತಿಸಲಾಯಿತು. ಮು.ಮಾ. 1 ರಿಂದ 3 ಇದ್ದ ಬಿಳಿ ಬಟ್ಟೆಯ ಚೀಲವನ್ನು ಮು.ಮಾ. 1/1 ರಿಂದ 3/1 ಎಂದು ಕ್ರಮವಾಗಿ ಗುರುತಿಸಲಾಯಿತು. ಈಗ ತೋರಿಸಿದ ನಕಾಶೆಯಲ್ಲಿ ನನ್ನ ರುಜು ಇದೆ. ಆ ನಕಾಶೆಯನ್ನು ನಿ.ಪಿ. 4 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ಆ ರುಜುವನ್ನು ಎಲ್ಲಿ ಮಾಡಿದೆ ಎಂದು ನನಗೆ ನೆನಪಿಲ್ಲ. ಈಗ ನನಗೆ ನೆನಪು ತುಂಬಾ ಕಡಿಮೆ ಆಗಿದೆ .

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀಮತಿ ಪಿ ಸಿ ಕೆ ರವರು**

ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ. ಸಾಕ್ಷಿಗೆ ರೂ. 500/- ಭತ್ಯೆ ಪಾವತಿ ಮಾಡಿದ್ದಾರೆ. ಆದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ